# ಗುರುದೇವ

ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2548 / ಶ್ರೀ ಪ್ಲವ ನಾಮ ಸಂವತ್ಸರ

ಪುಟ : ೪ ಸಂಪುಟ : ೬೮ ಸಂಚಿಕೆ : ೦೩.

15-12-2021 ಮಾರ್ಗಶಿರ ಮಾಸ : ಶುಕ್ಲ ಪಕ್ಷ ಬುಧವಾರ

RNI No. 13248/57-POSTEL REGD No. KA/SK/SMG 198/2021-23

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ




ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## "ಸಂತೋಷಕ್ಕಾಗಿ ನಾಲ್ಕು ಕಾರಣಗಳು"

ಸಹೃದಯರೇ,

ಈ ಭೂಮಿಯಲ್ಲಿ ಪ್ರತಿನಿತ್ಯ ಬದಲಾವಣೆಯನ್ನು ಕಾಣುತ್ತಿರುತ್ತೇವೆ. ಕ್ಷಣಗಳು ಉರುಳಿದಂತೆ ಪ್ರಕೃತಿಯಲ್ಲಿ ಅನೇಕ ಘಟನೆಗಳನ್ನು ಗಮನಿಸಬಹುದು. ಸಾಧಕನಿಗೆ ಯಾವುದೇ ಬದಲಾವಣೆಗಳು ಗುರಿಯನ್ನು ತಲುಪಲು ಅಯ್ಕೆಯಾಗದೇ ಇದ್ದರೂ, ಸಾಮಾನ್ಯವಾಗಿ ನಮ್ಮ ಗುರಿ ಮುಟ್ಟಲು ಪ್ರಯತ್ನಶೀಲರಾಗಿರುತ್ತೇವೆ.

2021ನೇ ವರ್ಷವು ಮುಗಿಯ[illegible]ಂದಿದೆ. ಹೊ[illegible]ದೊಂದು [illegible]ರುಷದ ಆಗಮನಕ್ಕೂ ಕಾತುರತೆ ನಡೆದಿದೆ.

WWW.HOMBUJAPADMAVATI.ORG

ಒಳ್ಳೆಯ-ಕೆಟ್ಟ ಘಟನೆಗಳ ಸಮ್ಮಿಶ್ರಣದ ಈ ದಿನಗಳು ಜೀವನಕ್ಕೆ ಅನುಭವದ ಪಾಠವನ್ನು ಕಲಿಸಿದೆ. ಹೊಸ ಉತ್ಸಾಹದೊಂದಿದೆ ಮುಂದಿನ ದಿನಗಳನ್ನು ನೋಡುತ್ತಿರುವ ಈ ಸಮಯದಲ್ಲಿ ಹೊಸವರುಷಕ್ಕೆ ಸುಮಧುರ ನೆನಪುಗಳೊಂದಿಗೆ ಸ್ವಾಗತಕ್ಕೆ ಅಣಿಯಾಗುತ್ತ ಈ ಉಪಕಥೆ ಸಾರಾಂಶವು ನಮ್ಮ ಬಾಳಲ್ಲಿ ಬರಲಿ ಎಂದು ಭಾವಿಸುವ.

ಒಬ್ಬ ವ್ಯಕ್ತಿ ದಪ್ಪವಾದ ಕೋಟ ಒಂದನ್ನು ತೊಟ್ಟು ತನ್ನ ಸೊಂಟದ ಸುತ್ತ ಹಗ್ಗ ಕಟ್ಟಿಕೊಂಡು ಎತ್ತಿನ ಮೇಲೆ ಕುಳಿತು ಅತ್ತಿಂದ ಇತ್ತ ಓಡಾಡುತ್ತಾ ಇರುತ್ತಿದ್ದ. ಯಾವಾಗಲೂ ಸಂತೋಷವಾಗಿ ಹಾಡನ್ನು ಹೇಳುತ್ತಾ ಸಮಯ ಕಳೆಯುತ್ತಿದ್ದ. ಇದನ್ನು ಗಮನಿಸಿದ ಒಬ್ಬ ವ್ಯಕ್ತಿ ಆತನನ್ನು "ನೀನು ಇಷ್ಟು ಹೇಗೆ ಸಂತೋಷವಾಗಿರುತ್ತೀಯಾ?" ಎಂದು ಕೇಳುತ್ತಾನೆ. ಅದಕ್ಕೆ ಆ ವ್ಯಕ್ತಿಯು "ನಾನು 4 ಕಾರಣಗಳಿಂದ ಸದಾ ಸಂತೋಷವಾಗಿರುತ್ತೇನೆ" ಎಂದು ಹೇಳುತ್ತಾನೆ.

ಮೊದಲನೇ ಕಾರಣ "ನಾನು ಒಬ್ಬ ಮನುಷ್ಯ ಹಾಗೂ ಮನುಷ್ಯನಾಗಿರುವ ಕಾರಣ ಮನುಷ್ಯನಾದವನು ಏನೆಲ್ಲಾ ವಸ್ತುಗಳನ್ನು ಭೋಗಿಸಬಹುದು ಅದೆಲ್ಲಾ ನನಗೆ ಸಾಧ್ಯ. ಅದಕ್ಕೆ ಸಂತೋಷವಾಗಿರುತ್ತೇನೆ".

ಎರಡನೇಯ ಕಾರಣ ಪುರುಷನಾಗಿರುವುದರಿಂದ ಈ ಪ್ರಕೃತಿಯ ಜೊತೆಗೆ ಸ್ತ್ರೀ ಸುಂದರತೆಯನ್ನು ಹೊಗಳಬಹುದು ಎಂದು.

ಮೂರನೇ ಕಾರಣ ನಾನು ಮುದುಕನಾಗಿದ್ದೇನೆ. ಈ ಕಾರಣದಿಂದ ಕಡಿಮೆ ವಯಸ್ಸಲ್ಲಿ ಸಾಯುವವರಿಗಿಂತ ಹೆಚ್ಚು ಬದುಕಿದ್ದೇನೆ ಎನ್ನುವ ಖುಷಿಯ ಜೊತೆಗೆ ಈ ಪ್ರಪಂಚವನ್ನು ಹೆಚ್ಚು ನೋಡಿರುವುದೇ ನನಗೆ ಸಂತೋಷ ಹಾಗೂ

ನಾಲ್ಕನೇ ಕಾರಣ ಮುಖ್ಯವಾಗಿರುವುದು ಅದೇನೆಂದರೆ ನಾನು ಸಾಯಲು ತಯಾರಿದ್ದೇನೆ. ನನಗೆ ಯಾವುದೇ ಭಯವಿಲ್ಲ, ಚಿಂತೆಯಿಲ್ಲ.

ಇದು ಎಲ್ಲರ ಜೀವನದ ವಾಸ್ತವ ಸತ್ಯವಾಗಿದೆ. ಇದನ್ನು ಅರಿತು ಬದುಕು ಸಾಗಿಸಿದರೆ ನಿಶ್ಚಿತ ಗುರಿ ತಲುಪುವಲ್ಲಿ ಯಾವುದೇ ಅಡೆ-ತಡೆಯಿಲ್ಲ. ಹೊಸತಾದ ಉತ್ಸಾಹದಲ್ಲಿ ಒಳ್ಳೆಯ ಭರವಸೆಯೊಂದಿಗೆ ಮುಂದಿನ ಹೆಜ್ಜೆಗಳೊಂದಿಗೆ ಸಾಗೋಣ.

**ಶುಭವಾಗಲಿ**

### ಕಾರ್ತಿಕ ದೀಪೋತ್ಸವ ಬೆಡಗು

## "ಸರ್ವರಿಗೂ ಜ್ಞಾನಜ್ಯೋತಿ ಬೆಳಗುವಂತಾಗಲಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



ಹೊಂಬುಜ : ಹೊಂಬುಜದ ಭ. ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಕಾರ್ತಿಕಮಾಸದ ಲಕ್ಷದೀಪೋತ್ಸವವು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಸಾನಿಧ್ಯದಲ್ಲಿ ನ. 24ರಂದು ಸಾಂಗವಾಗಿ [illegible] ಸುತ್ತಮುತ್ತಲಿನ [illegible] ಪರಿಸರವು ಬೆಳಕಿನದೀಪಾಲಂಕಾರದಿಂದ ಕಂಗೊಳಿಸುತ್ತಿತ್ತು.

2ನೇ ಪುಟಕ್ಕೆ

### ಪಟ್ಟಾಭಿಷೇಕ 10ನೇ ವರ್ಷದ ವರ್ಧಂತ್ಯುತ್ಸವ

## "ವಿವೇಕದಿಂದ ಗುರಿ ಸಾಧನೆ ಸಾಧ್ಯ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



ಹೊಂಬುಜ : "ವಿವೇಕಶೂನ್ಯ ಮನುಷ್ಯ ಪಶುವಿಗೆ ಸಮಾನ. ವಿವೇಕದಿಂದಾಗಿಯೇ ಮನುಷ್ಯನು ತನ್ನ ಗುರಿಯನ್ನು ಹೊಂದಲು ಸಹಕಾರಿಯಾಗುತ್ತದೆ. ತನ್ನ ಎಲ್ಲ ಕ್ರಿಯೆಗಳಲ್ಲಿ ವಿವೇಕವನ್ನು ಬಳಸಿಕೊಳ್ಳುವ ಶಕ್ತಿ ಮನುಷ್ಯನಿಗಿದೆ" ಎಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಆಶೀರ್ವಚನ ನೀಡಿದರು.

2ನೇ ಪುಟಕ್ಕೆ

### ಕುಂದಾದ್ರಿ ವಾರ್ಷಿಕ ಜಾತ್ರಾ ಮಹೋತ್ಸವ

ಪ್ರತಿ ವರ್ಷದಂತೆ ಈ ವರ್ಷವೂ ಜನವರಿ 14, 2022ರ ಶುಕ್ರವಾರದಂದು ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಅಧೀನ ಕ್ಷೇತ್ರವಾಗಿರುವ ಕುಂದಾದ್ರಿ ಕ್ಷೇತ್ರದಲ್ಲಿ ವಾರ್ಷಿಕ ಪೂಜಾ ಮಹೋತ್ಸವವು ನೆರವೇರಲಿದೆ. ಅಂದು ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿಗೆ ನವಕಳಶಾಭಿಷೇಕ, ವಿಶೇಷ ಪೂಜೆ, ಶ್ರೀ ಪದ್ಮಾವತಿ ದೇವಿ ಷೋಡಶೋಪಚಾರ ಪೂಜೆ ಹಾಗೂ ಆಚಾರ್ಯ ಕುಂದಕುಂದರ ಪಾದಚರಣಗಳಿಗೆ ಪಾದಪೂಜೆ ಏರ್ಪಡಿಸಲಾಗಿದೆ. ಬೆಳಿಗ್ಗೆ 8.00 ರಿಂದ ಪೂಜಾ ವಿಧಾನಗಳು ಆರಂಭಗೊಳ್ಳಲಿದೆ. ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಮಕರ ಸಂಕ್ರಾಂತಿಯ ಶುಭದಿನದಂದು ಕುಂದಾದ್ರಿ ಶ್ರೀಕ್ಷೇತ್ರದಲ್ಲಿ ಧಾರ್ಮಿಕ ವಿಧಿ-ವಿಧಾನಗಳು ನೆರವೇರಲಿವೆ. ಈ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಭಕ್ತಬಾಂಧವರು ಭಾಗವಹಿಸುವಂತೆ ಅಪೇಕ್ಷಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕ : ಫೋ: 08185-262722, ಮೊ: 9482781142, 8762546387.

ಆಡಳಿತಾಧಿಕಾರಿಗಳು, ಶ್ರೀ ಹೊಂಬುಜ ಜೈನ ಮಠ

## ದೀಪೋತ್ಸವ

**ಹೊಂಬುಜ:** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಪುರಾತನ ಮಕ್ಕಳ ಬಸದಿಯಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಪಾವನ ಸಾನಿಧ್ಯದಲ್ಲಿ ಡಿ. 11ರ, 2020 ರ ಶುಕ್ರವಾರದಂದು ದೀಪೋತ್ಸವವು ಜರುಗಿತು.

## ಹೊಂಬುಜದ ತ್ರಿಕೂಟ ಜಿನಮಂದಿರದಲ್ಲಿ ದೀಪೋತ್ಸವ



**ಹೊಂಬುಜ :** ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ತ್ರಿಕೂಟ ಜಿನಮಂದಿರದಲ್ಲಿ ನವೆಂಬರ್ 26ರ ಮಂಗಳವಾರದಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಸಾನಿಧ್ಯದಲ್ಲಿ ದೀಪೋತ್ಸವವು ಜರುಗಿತು.



**ವರಂಗ :** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಅಧೀನ ಕ್ಷೇತ್ರ ಶ್ರೀ ವರಂಗ ಜೈನ ಮಠದಲ್ಲಿ ಭಗವಾನ್ ಶ್ರೀ ನೇಮಿನಾಥ ಸ್ವಾಮಿ ಬಸದಿಯಲ್ಲಿ ಹಾಗೂ ಕೆರೆಬಸದಿಯಲ್ಲಿ ನ. 30, 2020ರ ಸೋಮವಾರದಂದು ಕಾರ್ತೀಕ ಮಾಸದ ದೀಪೋತ್ಸವವು ಜರುಗಿತು. ಧರ್ಮ ಬಾಂಧವರು ಆಗಮಿಸಿ ದೀಪೋತ್ಸವದಲ್ಲಿ ಪಾಲ್ಗೊಂಡರು



**ಹಟ್ಟಿಯಂಗಡಿ :** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಅಧೀನ ಕ್ಷೇತ್ರ ಶ್ರೀ ಹಟ್ಟಿಯಂಗಡಿ ಜೈನ ಮಠದಲ್ಲಿ ಭಗವಾನ್ ಶ್ರೀ ಚಂದ್ರನಾಥ ಸ್ವಾಮಿ ಹಾಗೂ ಶ್ರೀ ಜಟ್ಟಿಂಗರಾಯ ಕ್ಷೇತ್ರಪಾಲ ಸ್ವಾಮಿ ಬಸದಿಯಲ್ಲಿ ಡಿ. 28, 2020 ರ ಶನಿವಾರದಂದು ಕಾರ್ತೀಕ ಮಾಸದ ದೀಪೋತ್ಸವವು ಜರುಗಿತು. ಧರ್ಮಬಾಂಧವರು ಆಗಮಿಸಿ ದೀಪೋತ್ಸವದಲ್ಲಿ ಪಾಲ್ಗೊಂಡರು.

### ಭಕ್ತಾದಿಗಳ ಗಮನಕ್ಕೆ

ಅತಿಶಯ ಕ್ಷೇತ್ರ ಹೊಂಬುಜದ ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರ ಬಸದಿಯ ಜೀರ್ಣೋದ್ಧಾರ ಕಾರ್ಯ ಪ್ರಾರಂಭವಾಗಿದ್ದು, ದರ್ಶನದ ಸಮಯದಲ್ಲಿ ಬದಲಾವಣೆಯಾಗಿದೆ.

**ದರ್ಶನದ ಸಮಯ : ಬೆಳಗ್ಗೆ: 07-00 ರಿಂದ 09.00 ರವರೆಗೆ**

**ಸಂಜೆ: 06-00 ರಿಂದ 08.00ರವರೆಗೆ**

ಶ್ರೀಕ್ಷೇತ್ರದ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಇನ್ನಿತರ ಎಲ್ಲಾ ಬಸದಿಗಳಲ್ಲಿ ಪೂಜಾ ಮತ್ತು ಇತರ ವಿಧಿ-ವಿಧಾನಗಳು ಎಂದಿನಂತೆ ನೆರವೇರಲಿವೆ. ಆರಾಧನೆ, ನಾಮಕರಣ ಇನ್ನಿತರ ಸೇವೆಗಳನ್ನು ಸಲ್ಲಿಸುವವರು ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯಲ್ಲಿ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಧರ್ಮಬಂಧುಗಳು ಸಹಕರಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗಾಗಿ ಶ್ರೀಮಠದ ಕಛೇರಿಯಲ್ಲಿ ಸಂಪರ್ಕಿಸಲು ತಿಳಿಸಿದೆ. ಸಂಪರ್ಕ : ಶ್ರೀ ಸುಧೀರ ಎ. ಕುಸನಾಳೆ ಮೊ: 9243282246. **ಕಛೇರಿ : 9481453653, 9481249127.**





ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರದಲ್ಲಿ ಭಕ್ತಾದಿಗಳು ಸಲ್ಲಿಸುವ

## ಹರಕೆ, ಪೂಜೆ ಮತ್ತು ಕಾಣಿಕೆ ಪಟ್ಟಿಯ ವಿವರ

| | | | | | |
|---|---|---|---|---|---|
| 1 | ಶ್ರೀ ಪಾರ್ಶ್ವನಾಥಸ್ವಾಮಿಗೆ ಪಂಚಾಮೃತ ಅಭಿಷೇಕ | 120/- | 23 | ಕುಂಕುಮ ಅರ್ಚನೆ | 100/- |
| 2 | ಶ್ರೀ ನೇಮೀಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ | 120/- | 24 | ಜಟ್ಟಿಂಗರಾಯನ ಪಂಚಕಜ್ಜಾಯ ಪೂಜೆ | 200/- |
| 3 | ಶ್ರೀ ಪದ್ಮಾವತೀ ಅಮ್ಮನವರಿಗೆ ಪಂಚಾಮೃತ ಅಭಿಷೇಕ | 120/- | 25 | ಜಟ್ಟಿಂಗರಾಯನ ವಿಶೇಷ ಅಲಂಕಾರ | 100/- |
| 4 | ಶ್ರೀ ಸರಸ್ವತೀ ದೇವಿ ಅಮ್ಮನವರಿಗೆ ವಿಶೇಷ ಪೂಜೆ | 100/- | 26 | ಹೆಜ್ಜೆ ನಮಸ್ಕಾರ | 50/- |
| 5 | ಕ್ಷೀರಾಭಿಷೇಕ | 100/- | 27 | ನಾಮಕರಣ | 3000/- |
| 6 | ಮಹಾನೈವೇದ್ಯ ಪೂಜೆ | 500/- | 28 | ಕರ್ಣವೇದನ | 100/- |
| 7 | ವರಹ ಪೂಜೆ | 150/- | 29 | ತ್ಯಾಗಿಗಳಿಗೆ ಆಹಾರ ನಿಧಿ | 1000/- |
| 8 | ಪಂಚಕಜ್ಜಾಯ ಪೂಜೆ | 100/- | 30 | ಅಕ್ಷರಾಭ್ಯಾಸ ಪ್ರಾರಂಭ | 1000/- |
| 9 | ಪ್ರತ್ಯೇಕ ಪ್ರಸಾದ ಕಾಣಿಕೆ | 100/- | 31 | ಹಣ್ಣು ಕಾಯಿ ಪೂಜೆ | 100/- |
| 10 | ಸೀರೆ ಕಾಣಿಕೆ | 60/- | 32 | ಲಗ್ನ ಕಾಣಿಕೆ | 5000/- |
| 11 | ಉಡಿ ಒಂದರ ಕಾಣಿಕೆ | 50/- | 33 | ಅನ್ನ ಪ್ರಾಶನ | 100/- |
| 12 | ಶ್ರೀ ಸ್ವಾಮಿ ಸಹಸ್ರನಾಮ ಪೂಜೆ | 200/- | 34 | ಹಣ್ಣು ಕಾಯಿ | 10/- |
| 13 | ಶ್ರೀ ಪದ್ಮಾವತೀ ಸಹಸ್ರನಾಮ ಪೂಜೆ | 200/- | 35 | ವಾಹನ ಪೂಜೆ | 200/- |
| 14 | ನವ ಕಲಶಾಭಿಷೇಕ | 500/- | 36 | ಸಿಹಿ ತಿಂಡಿ ಪ್ರಸಾದ | 2500/- |
| 15 | 24 ಕಲಶಾಭಿಷೇಕ | 800/- | 37 | ನಂದಾದೀಪ (4 ತಿಂಗಳಿಗೆ 1 ಡಬ್ಬ ಎಣ್ಣೆ ಮತ್ತು ಕಾಣಿಕೆ) | 2100/- |
| 16 | 54 ಕಲಶಾಭಿಷೇಕ | 1300/- | 38 | ಶ್ರೀ ಬೃಹತ್ ಕಲಿಕುಂಡ ಯಂತ್ರಾರಾಧನೆ | 6000/- |
| 17 | 108 ಕಲಶಾಭಿಷೇಕ | 2500/- | 39 | ಶ್ರೀ ಬೃಹತ್ ಪದ್ಮಾವತೀದೇವಿ ಆರಾಧನೆ | 6000/- |
| 18 | ಉಪನಯನ ಸಂಸ್ಕಾರ (ವ್ರತ ಸ್ವೀಕಾರ) | 1500/- | 40 | ಬೃಹತ್ ನವಗ್ರಹ ಶಾಂತಿ | 7000/- |
| 19 | ಚೌಲ ಕರ್ಮ | 2000/- | 41 | ಅಮ್ಮನವರ ವಿಶೇಷ ಬೆಳ್ಳಿ ಅಲಂಕಾರ | 1200/- |
| 20 | ತುಲಾಭಾರ ಸೇವೆ | 1008/- | 42 | ಅಮ್ಮನವರ ವಿಶೇಷ ಸ್ವರ್ಣಾಲಂಕಾರ | 5000/- |
| 21 | ಲಕ್ಷ ಹೂವಿನ ಪೂಜೆಗೆ ಕಾಣಿಕೆ | 500/- | 43 | ಕಾಳಸರ್ಪ ದೋಷ ಶಾಂತಿ | 3000/- |
| 22 | ಲಕ್ಷ ದೀಪೋತ್ಸವಕ್ಕೆ ಕಾಣಿಕೆ | 1008/- | 44 | ಲಘು ಶಾಂತಿ ಹೋಮ | 2000/- |

WWW,HOMBUJAPADMAVATI.ORG

ವಿಜ್ಞಾಪನೆಗಳು : 1) ಶ್ರೀ ಕ್ಷೇತ್ರದಲ್ಲಿರುವ ವಿದ್ಯಾರ್ಥಿಗಳಿಗೆ ಮತ್ತು ಬರುವ ಯಾತ್ರಿಕರಿಗೆ ಧರ್ಮಾರ್ಥ ಊಟ ಮತ್ತು ಉಪಾಹಾರದ ವ್ಯವಸ್ಥೆಗಳಿವೆ. ಈ ಬೃಹತ್ ಧರ್ಮಕಾರ್ಯಕ್ಕೆ ಎಲ್ಲಾ ಧರ್ಮಾನುರಾಗಿಗಳು ಉದಾರ ಕೊಡುಗೆಯನ್ನು ನೀಡಿ ಪುಣ್ಯ ಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇವೆ. 2) ಪೂಜಾ ಧ್ರುವನಿಧಿ ಮೊಬಲಗು ರೂ. 3000-00.

ಸೂಚನೆಗಳು : 1) ಶ್ರೀ ಕ್ಷೇತ್ರದಲ್ಲಿರುವ ಜಿನಾಲಯಗಳ ಗರ್ಭಗುಡಿ ಪ್ರವೇಶಿಸಿ ಭಕ್ತಾದಿಗಳು ಸ್ವತಃ ಪೂಜೆ ಮತ್ತು ಸೇವೆಸಲ್ಲಿಸುವುದನ್ನು ನಿಷೇಧಿಸಲಾಗಿದೆ. 2) ಶ್ರೀ ಕ್ಷೇತ್ರದಲ್ಲಿರುವ ಬಸದಿಗಳಲ್ಲಿ ಭಕ್ತಾದಿಗಳು ಅಪೇಕ್ಷಿಸುವ ಯಾವುದೇ ರೀತಿಯ ಪೂಜೆ ಮತ್ತು ಸೇವೆಗಳನ್ನು ನೆರವೇರಿಸಿಕೊಡುವ ಅವಕಾಶವನ್ನು ಕಾದಿರಿಸಲಾಗಿದೆ. ಈ ವಿಚಾರದಲ್ಲಿ ಶ್ರೀಮಠದ ಪರಮಪೂಜ್ಯ ಮಹಾಸ್ವಾಮಿಗಳವರ ನಿರ್ಣಯವೇ ಅಂತಿಮವಾದುದು.

ದಿನಾಂಕ : 01-02-2021

ಆಡಳಿತಾಧಿಕಾರಿ
ಶ್ರೀ ಹೊಂಬುಜ ಜೈನಮಠ, ಶಿವಮೊಗ್ಗ ಜಿಲ್ಲೆ - 577 436

## ಶ್ರೀಕ್ಷೇತ್ರ ಹೊಂಬುಜದಲ್ಲಿ ಲಕ್ಷದೀಪೋತ್ಸವ ಸಂಭ್ರಮ



ದೀಪೋತ್ಸವ ನಿಮಿತ್ತ ಶ್ರೀ ಶಾಂತಿನಾಥ ವಿಧಾನ.



ದೀಪೋತ್ಸವದಂದು ಅಷ್ಟಪಲ್ಲಕ್ಕಿ ಉತ್ಸವ.



ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿರುವ ಶ್ರೀಮಠ.



ಲಕ್ಷದೀಪೋತ್ಸವದ ಒಂದು ನೋಟ.

## ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ 2022




ಅತಿಶಯ ಶ್ರೀಕ್ಷೇತ್ರ ಹೊಂಬುಜದಿಂದ ಕನ್ನಡ ಬಾಷೆಯಲ್ಲಿ ಪ್ರಕಟಗೊಂಡಿರುವ "ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ" ನವೆಂಬರ್ 24, 2021ರ ಲಕ್ಷದೀಪೋತ್ಸವದಂದು ಬಿಡುಗಡೆಯಾಗಿದೆ. ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ ಶ್ರೀಕ್ಷೇತ್ರದಲ್ಲಿ ಲಭ್ಯವಿದೆ. ಕನ್ನಡ ದಿನದರ್ಶಿಕೆಯ ಬೆಲೆ 50/- ಅಂಚೆಯ ಮೂಲಕ ಪಡೆಯಲಿಚ್ಛಿಸುವವರು ಅಂಚೆ ವೆಚ್ಚ ಸೇರಿ ರೂ. 60/- ಶ್ರೀಮಠದ ವಿಳಾಸಕ್ಕೆ ಕಳುಹಿಸಿದಲ್ಲಿ ಅಂಚೆ ಮೂಲಕ ಕಳುಹಿಸಲಾಗುವುದು.

WWW.HOMBUJAPADMAVATI.ORG

## ಜೀರ್ಣೋದ್ಧಾರ ಪ್ರಗತಿ



ಅತಿಶಯ ಕ್ಷೇತ್ರ ಹೊಂಬುಜದ ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರ ಬಸದಿಯ ಜೀರ್ಣೋದ್ಧಾರ ಕೈಗೊಳ್ಳಲು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಯವರು ಕಾರ್ತಿಕ ಮಾಸದ ಶುಭದಿನ 19-11-2020ರಂದು ಭೂಮಿಪೂಜೆ ಮಾಡಲಾಗಿದ್ದು, ಪ್ರಸ್ತುತ ಜೀರ್ಣೋದ್ಧಾರ ಕಾರ್ಯವು ಪ್ರಗತಿಯಲ್ಲಿದೆ.

ಅಮ್ಮನವರ ಗರ್ಭಗೃಹದಲ್ಲಿ ಎಂದಿನಂತೆ ಪುರೋಹಿತರಿಂದ ನಿತ್ಯ ಪೂಜೆಗಳು ನಡೆಯುತ್ತಿವೆ. ಭ. ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯಲ್ಲಿ ಎಲ್ಲಾ ಪೂಜೆ, ಆರಾಧನೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಬಸದಿಯ ಸಂಪೂರ್ಣ ಶಿಲಾಮಯವನ್ನಾಗಿಸುವ ಈ ಶುಭ ಕಾರ್ಯಕ್ಕೆ ಧರ್ಮಬಾಂಧವರು ಈ ಹಿಂದಿನಂತೆ ತನು-ಮನ-ಧನ ರೂಪದ ಸಹಕಾರ ನೀಡಬೇಕಾಗಿ ಅಪೇಕ್ಷಿಸುತ್ತೇವೆ.

For contact office : 08185-262722, 9481453653, 9449093540, 9481249127. For remittance by NEFT/RTGS : Sri Hombuja Jain Math, Humcha; SB A/c with Karnataka Bank Humcha Branch- A/c No : 3182500101025001 IFSC Code : KARB0000318.


# ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2021-23

Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬.


Edited, Published & Printed by Sri Sudir A. Kusanale,on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722, 262209